ಗೆಲುವಿಗೆ ಕಾರಣರಾಗಿದ್ದವರು ಸ್ಟೋಕ್ಸ್. ಹನ್ನೊಂದು ವರ್ಷಗಳ ಅವಧಿಯಲ್ಲಿ ಅವರ ಏಕದಿನ ಕ್ರಿಕೆಟ್ ಪಂದ್ಯಗಳ ರನ್ ಗಳಿಕೆಯ ಸರಾಸರಿ 39ಕ್ಕೂ ಹೆಚ್ಚು. ಬೌಲಿಂಗ್‌ನಲ್ಲೂ ಅವರ ಸಾಧನೆ ಗಮನಾರ್ಹ. ಹೊಸಕಾಲದಲ್ಲಿ ಆಲ್‌ರೌಂಡರ್‌ಗಳಿಗೆ ಹೆಚ್ಚು ಬೇಡಿಕೆ ಇರುವುದೇನೊ ನಿಜ. ಆದರೆ, ಅದು ಅವರನ್ನು ಯಾವ ಮಟ್ಟಕ್ಕೆ ಹಿಂಡಿ ಹಿಪ್ಪೆಕಾಯಿ ಮಾಡುತ್ತಿದೆ ಎನ್ನುವುದಕ್ಕೆ ಅವರ ನಿವೃತ್ತಿ ಘೋಷಣೆ ಕನ್ನಡಿ ಹಿಡಿಯುತ್ತದೆನ್ನುವುದೂ ಸತ್ಯ.

ಹಳಬರು ಕ್ರಿಕೆಟ್‌ಗೆ ವಿದಾಯ ಹೇಳಿದ ಸಂದರ್ಭ ಹೇಗಿತ್ತೆನ್ನುವುದಕ್ಕೆ ಕೆಲವು ಆಸಕ್ತಿಕರ ಮೆಲುಕುಗಳು ನಮ್ಮ ಮುಂದಿವೆ.

ಶ್ರೀಲಂಕಾದ ಅರವಿಂದ ಡಿಸಿಲ್ವ ಟೆಸ್ಟ್ ಕ್ರಿಕೆಟ್‌ನಿಂದ 2003ರಲ್ಲಿ ನಿವೃತ್ತಿಯಾದಾಗ ಅವರಿಗೆ 37 ವರ್ಷವಾಗುತ್ತಾ ಬಂದಿತ್ತು. ಬಾಂಗ್ಲಾದೇಶದ ವಿರುದ್ಧ ಆಡಿದ ತಮ್ಮ ಕೊನೆಯ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಅವರು ಭರ್ಜರಿ 206 ರನ್‌ಗಳನ್ನು ದೋಚಿದ್ದರು. 28 ಬೌಂಡರಿ, 1 ಸಿಕ್ಸರ್ ಇದ್ದ ಆ ಇನಿಂಗ್ಸ್ ಕಟ್ಟಲು ಅವರು ಆಡಿದ್ದು 234 ಎಸೆತಗಳನ್ನಷ್ಟೆ. ವಾಮನಮೂರ್ತಿಯಂಥ ಡಿಸಿಲ್ವ ತಮ್ಮ ವೃತ್ತಿಬದುಕಿನ ಸಂಜೆಯಲ್ಲೂ ಅನಿಲ್ ಕುಂಬ್ಳೆ ತರಹದ ಕಿಲಾಡಿ ಬೌಲರ್ ಕೂಡ ಕಂಗಾಲಾಗುವಂತೆ ಮಾಡಿದ್ದವರು.

ಹತ್ತು ವರ್ಷಗಳ ಹಿಂದೆ ಸಚಿನ್ ತೆಂಡೂಲ್ಕರ್ ಆಡಿದ್ದ ತಮ್ಮ ವೃತ್ತಿಬದುಕಿನ ಕೊನೆಯ ಏಕದಿನ ಪಂದ್ಯದಲ್ಲಿ ಅರ್ಧಶತಕ ಹೊಡೆದಿದ್ದರು. ಪಾಕಿಸ್ತಾನದ ವಿರುದ್ಧ ಏಷ್ಯಾ ಕಪ್‌ನ ಆ ಪಂದ್ಯದಲ್ಲಿ ಭಾರತ ಗೆದ್ದಿತ್ತಾದರೂ ಫೈನಲ್‌ಗೆ ಹೋಗಲು ಆಗಿರಲಿಲ್ಲ. 330 ರನ್‌ಗಳ ದೊಡ್ಡ ಟಾರ್ಗೆಟ್ ಬೆನ್ನಟ್ಟಿದ್ದ ಆ ಪಂದ್ಯದಲ್ಲಿ ವಿರಾಟ್ ಕೊಹ್ಲಿ 183 ರನ್‌ಗಳನ್ನು ಗಳಿಸಿದ್ದರು. ಆಗಿನ್ನೂ 23ರ ಹರೆಯದವರಾಗಿದ್ದ ಅವರ ಪಾದಗಳ ಪಾದರಸದಂತಹ ಚಲನೆ, ಎದುರಾಳಿಗಳ ಎದೆ ಝಲ್ಲೆನ್ನಿಸುತ್ತಿದ್ದ ಕವರ್ ಡ್ರೈವ್‌ಗಳ ಕರಾಮತ್ತು ಈಗ ನೆನಪು. ವಿರಾಟ್ ಈಗಲೂ ಬೌಂಡರಿ ಹೊಡೆಯುವಾಗ ತಮ್ಮ ಹಳೆಯ ಗತ್ತನ್ನೇ ತೋರುತ್ತಾರಾದರೂ ಕ್ರೀಸ್‌ನಲ್ಲಿ ಲಂಗರು ಹಾಕಲು ಮಾತ್ರ ಅವರಿಗೆ ಆಗುತ್ತಿಲ್ಲ.


ಟೆನ್ನಿಸ್ ಅಂಗಳದಲ್ಲಿ ತರುಣಿಯರಿಗೆ ಬೆವರಿಳಿಸುವ ಸೆರೇನಾ ವಿಲಿಯಮ್ಸ್



ವಯೋಭಾರಕ್ಕೆ ಹಣ್ಣಾದರೆ ಬೆನ್ ಸ್ಟೋಕ್ಸ್?

ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್, ಭಾರತದ ಸೌರವ್ ಗಂಗೂಲಿ ಕೂಡ ತಮ್ಮ ಕ್ರಿಕೆಟ್ ಬದುಕಿನ ಕೊನೆಯ ಹಂತದಲ್ಲಿ ರನ್ ಗಳಿಕೆಗೆ ಪರದಾಡಿದ್ದವರೇ. ರಾಹುಲ್ ದ್ರಾವಿಡ್, ಸಚಿನ್ ತರಹದ ಘಟಾನುಘಟಿಗಳು ತಮ್ಮ ಫಾರ್ಮ್ ಅಲ್ಲಾಡತೊಡಗಿದ್ದಾಗ ದೇಸಿ ಕ್ರಿಕೆಟ್ ಪಂದ್ಯಗಳಲ್ಲಿ ಆಡುವ ನಿರ್ಧಾರ ತಳೆಯುತ್ತಿದ್ದರು. ಈಗ ಟ್ವೆಂಟಿ20 ಕ್ರಿಕೆಟ್ ಬೇರೆ ಹಿಂಡಿ ಹಿಪ್ಪೆಕಾಯಿ ಮಾಡುತ್ತಿರುವುದರಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಆಡುವವರು ರಣಜಿಯ ಮಹತ್ವದ ಪಂದ್ಯಗಳಲ್ಲೂ ಆಡಲು ಮನಸ್ಸು ಮಾಡುತ್ತಿಲ್ಲ. ಕೊಹ್ಲಿ ಅಂತಹುದೊಂದು ದಾರಿಯನ್ನು ಕಂಡುಕೊಳ್ಳಬೇಕಿತ್ತೇನೊ ಎಂದು ಅವರ ಅನೇಕ ಅಭಿಮಾನಿಗಳು ಕೂಡ ಅಭಿಪ್ರಾಯಪಟ್ಟಿದ್ದಾರೆ.


ವಯಸನ್ನು ಕೆಣಕುವಂತೆ ಆಡುತ್ತಿರುವ ಜೊಕೊವಿಚ್

ಏಕದಿನ ಕ್ರಿಕೆಟ್‌ನ ವೇಗೋತ್ಕರ್ಷದಂತೆ ಕಂಡಿದ್ದ, ವೆಸ್ಟ್‌ಇಂಡೀಸ್‌ನ ವಿವಿಯನ್ ರಿಚರ್ಡ್ಸ್ ಕೂಡ 1991ರ ಮೇ 27ರಂದು ಇಂಗ್ಲೆಂಡ್ ಎದುರು ಆಡಿದ ಕೊನೆ ಏಕದಿನ ಪಂದ್ಯದಲ್ಲಿ 37 ರನ್‌ಗಳನ್ನು ಹೊಡೆದಿದ್ದರು. ಆಗ ಅವರ ವಯಸ್ಸು 39. ವೆಸ್ಟ್‌ಇಂಡೀಸ್‌ನ ಬ್ರಯಾನ್ ಲಾರಾ ಕೊನೆಯ ಟೆಸ್ಟ್ ಆಡಿದ್ದು 2006ರಲ್ಲಿ. ಆಗ ಅವರಿಗೆ 37 ವರ್ಷ ವಯಸ್ಸು. ಪಾಕಿಸ್ತಾನದ ಎದುರು ಹೀನಾಯವಾಗಿ ಸೋತ ಆ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅವರು 49 ರನ್ ಹೊಡೆದು ಔಟಾಗಿದ್ದರು. ಶಿವನಾರಾಯಣ್ ಚಂದ್ರಪಾಲ್ ಮಾತ್ರ ಆ ಇನಿಂಗ್ಸ್‌ನಲ್ಲಿ ಅವರಿಗಿಂತ ಹೆಚ್ಚು (69) ರನ್ ಗಳಿಸಿದ್ದರು.

ಇತಿಹಾಸದ ಪುಟಗಳ ಅಂಕಿಅಂಶಗಳು, ವಯಸ್ಸೆನ್ನುವುದು ‘ಜಸ್ಟ್ ಎ ನಂಬರ್’ ಎನ್ನುವ ಹೊಸಕಾಲದ ನುಡಿಗಟ್ಟನ್ನೇ ಉಜ್ಜಿ ಉಜ್ಜಿ ಹೇಳುತ್ತವೆ. ಆ ಪುಟಗಳಲ್ಲಿ ವಿರಾಟ್ ಕೂಡ ವಿರಾಜಮಾನರಾಗಬೇಕು. ತಮ್ಮ ಕೊನೆಯ ಟೆಸ್ಟ್‌ನಲ್ಲಿ ದ್ವಿಶತಕ ಹೊಡೆದು ಬಂದ ಐದಡಿ ಮೂರಿಂಚಿನ, ದಪ್ಪ ಹೊಟ್ಟೆಯ ಅರವಿಂದ ಡಿಸಿಲ್ವ ಚಹರೆಯ ನೆನಪು ಕಟ್ಟುಮಸ್ತಾದ ಜಿಮ್ ಬಾಡಿಯ ಕೊಹ್ಲಿ ಅವರನ್ನು ಕೂಡ ಈಗ ಅಣಕಿಸುತ್ತಿರುವುದು ಸುಳ್ಳಲ್ಲ.

ಪ್ರತಿಕ್ರಿಯಿಸಿ: feedback@sudha.co.in